**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ**

ಸಿಸಿ ನಂಬ್ರ: 536/18
ಸಿಡಬ್ಲ್ಯೂ- 10
ಪಿಡಬ್ಲ್ಯೂ-10

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ. ರವೀಂದ್ರನಾಥ ರಾವ್ |
| ತಂದೆಯ ಹೆಸರು | : | ನಾರಾಯಣ ರಾವ್ |
| ಪ್ರಾಯ | : | 73 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿ, ಶ್ರೀದೇವಿ ಆಸ್ಪತ್ರೆ ಕುಂದಾಪುರ |
| ವಾಸ | : | ಕೋಟೇಶ್ವರ |

ದಿನಾಂಕ: **07-04-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಾನು 1988 ರಿಂದ ಇಲ್ಲಿಯವರೆಗೆ ಸಹ ವೈದ್ಯಾಧಿಕಾರಿಯಾಗಿ ಶ್ರೀದೇವಿ ಆಸ್ಪತ್ರೆ ಕುಂದಾಪುರದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ಆಶಾ ಶೆಟ್ಟಿ 38 ವರ್ಷ ರವರು ದಿನಾಂಕ 30-04-2018 ರಂದು 10.00 ಗಂಟೆಗೆ ಹಲ್ಲೆಯ ಹಿನ್ನಲೆಯಲ್ಲಿ ದಿನಾಂಕ 28-04-2018 ಆಸ್ಪತ್ರೆಗೆ ದಾಖಲಾಗಿದ್ದು ಅವರನ್ನು ಪರೀಕ್ಷಿಸಿ ಈ ಕೆಳಕಂಡ ಗಾಯ ಆಗಿದ್ದವು.

1. ಮುಖ ಹಾಗೂ ಮೂಗು ಬಾತಿತ್ತು ಹಾಗೂ ಮುಗಿನಿಂದ ರಕ್ತ ಬರುತ್ತಿತ್ತು.

ನನ್ನ ಅಭಿಪ್ರಾಯದಂತೆ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯ ಆಗಿದ್ದು ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 7 ಎಂದು, ಸಹಿಯನ್ನು ನಿ.ಪಿ. 7(ಎ) ಎಂದು ಗುರುತಿಸಲಾಯಿತು.

ಪಾಟಿ ಸವಾಲು: ಆರೋಪಿ ಪರ ವಕೀಲರಾದ ಶ್ರೀ ಕೆ ಪಿ ಎಸ್. ರವರಿಂದ

1. ಪ್ರಥಮವಾಗಿ ಗಾಯಾಳುವಿಗೆ 30 ನೇ ತಾರೀಖಿನಂದು ಚಿಕಿತ್ಸೆ ಕೊಟ್ಟಿರುತ್ತೇನೆ. ನನ್ನ ನಿ.ಪಿ.7 ರಲ್ಲಿ ಗಾಯದ ವಯಸ್ಸನ್ನು ತೋರಿಸಿರುವುದಿಲ್ಲ ಎಂದರೆ ಸರಿ. ಗಾಯಳು ನಮ್ಮ ಹತ್ತಿರ ಬರುವಾಗ ಆಕೆಗೆ ಮೂಗಿನಿಂದ ರಕ್ತ ಇಳಿಯುತ್ತಿತಾ ಎಂದರೆ ಸಾಕ್ಷಿ ಅಷ್ಟು ಇಳಿಯುತ್ತಿರಲಿಲ್ಲ, ಸ್ವಲ್ಪ ಸ್ವಲ್ಪ ರಕ್ತಸ್ರಾವ ಆಗುತ್ತಿತ್ತು ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಆ ಗಾಯ ಹೊಸತದ್ದಲ್ಲ. ನಿ.ಪಿ.7 ರಲ್ಲಿ ಹೇಳಿದ ಗಾಯವನ್ನು ಗಾಯಾಳು ಹೇಳಿದಂತೆ ಬರೆದಿರುವುದಿಲ್ಲ, ನಾನು ಆಕೆಯನ್ನು ಪರೀಕ್ಷಿಸಿದ ಮೇರೆಗೆ ಬರೆದಿರುತ್ತೇನೆ.

2. ಒಬ್ಬ ವ್ಯಕ್ತಿ ಗೇರು ಬೀಜ ಹೆಕ್ಕುವಾಗ ಮುಮ್ಮುಖವಾಗಿ ಬಿದ್ದು ಮೂಗು ನೆಲಕ್ಕೆ ತಾಗಿದರೆ ನಿ.ಪಿ. 7 ರಲ್ಲಿ ನಮೂದಿಸಿರುವ ಆಗುವ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ **(C/c)**